1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.62/2023

PW- 10

CW- 16

ಪ್ರ.ವ. ಬೋ.ದಿನಾಂಕಃ 05-02-2025

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ಬಿ. ಬಸವರಾಜಪ್ಪ |
| ತಂದೆ/ಗಂಡನ ಹೆಸರು | : | ಸಿದ್ದಪ್ಪ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ನಿವೃತ್ತ ಪಿಡಿಓ , |
| ವಾಸ | : | ಗುಂಡಗತ್ತಿ, ಹರಪನಹಳ್ಳಿ ತಾ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ದಿ.11-07-2022 ರಿಂದ ಆರು ತಿಂಗಳ ಕಾಲ ನಾನು ದೇವಿಕೆರೆಯಲ್ಲಿ ಪಿಡಿಓ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

ಬಿಳಿಚೋಡು ಪೊಲೀಸ್ ಠಾಣೆಯಿಂದ ಚಾಸಾ-1 ಇವರು ವಾಸವಾಗಿರುವ ಮನೆಯ ಖಾತಾ ಎಕ್ಸಟ್ರ್ಯಾಕ್ಟ ಕೊಡಲು ಕೇಳಿದ್ದ ಮೇರೆಗೆ ನಾನು ಖಾತಾ ಉತಾರ ನೀಡಿರುತ್ತೇನೆ, ಸದರಿ ಖಾತಾ ಉತಾರ ನೋಡುತ್ತಿದ್ದು, ಅದನ್ನು ನಿಪಿ.17 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ರುಜು ಇದ್ದು , ರುಜುವನ್ನು ನಿಪಿ.17(ಎ) ಎಂದು ಗುರುತಿಸಲಾಯಿತು.

ಪಾಟೀಸವಾಲುಃ- ಆರೋಪಿತರಪರ ಶ್ರೀ ಕೆ ಎಂ ಎಸ್ / ಎಲ್ ಯು ವಕೀಲರಿಂದ.

ನಿಪಿ.17 ರಲ್ಲಿ ಕೇಸ್ ನಂಬರ್ ನಮೂದು ಮಾಡಿಲ್ಲ. ಪೊಲೀಸರು ಚಾಸಾ-1 ಇವರ ಹೆಸರಿನಲ್ಲಿರುವ ನಿಮ್ಮ ಕಛೇರಿಯಲ್ಲಿರುವ ದಾಖಲೆಗಳನ್ನು ನೀಡಿ ಎಂದು ಕೇಳಿದ್ದರಿಂದ ನಿಪಿ.17 ನ್ನು ಕೊಟ್ಟಿರುತ್ತೇನೆ. ಸದರಿ ದಾಖಲೆ ಹೊರತುಪಡಿಸಿ ಬೇರೆ ದಾಖಲೆಯನ್ನು ನಾನು ಪೊಲೀಸರಿಗೆ ಕೊಟ್ಟಿಲ್ಲ. ಪತ್ರದ ಮುಖಾಂತರ ನಾನು ನಿಪಿ.17 ನ್ನು ಕಳುಹಿಸಿಲ್ಲ.

ಯಾವ ಉದ್ದೇಶಕ್ಕೋಸ್ಕರ ಬೇಕು ಎಂದು ನಾನು ಕೇಳಿಲ್ಲ. ಚಾಸಾ–1 ಇವರ ಮಾತು ಕೇಳಿ ನಿಪಿ.17 ದಾಖಲೆಯನ್ನು ಕೊಟ್ಟಿರುತ್ತೇನೆ ಎನ್ನುವುದು ಸುಳ್ಳು.

ಮರು ವಿಚಾರಣೆಃ– ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/–

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.62/2023

PW- 09

CW- 15

ಪ್ರ.ವ. ಬೋ.ದಿನಾಂಕಃ 05-02-2025

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ಬಸವರಾಜ |
| ತಂದೆ/ ಗಂಡನ ಹೆಸರು | : | ಷಣ್ಮುಖಪ್ಪ |
| ವಯಸ್ಸು | : | 24 ವರ್ಷ |
| ಉದ್ಯೋಗ | : | ಖಾಸಗಿ ನೌಕರ |
| ವಾಸ | : | ಬಹದ್ದೂರು ಘಟ್ಟ , ಚಿತ್ರದುರ್ಗ ತಾ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನಿಪಿ.2 ದೂರು ನೋಡುತ್ತಿದ್ದು , ಅದರಲ್ಲಿರುವ ಬರವಣಿಗೆ ನನ್ನದಾಗಿದೆ. ದೂರು ಬರೆದವರು ಎಂದು ನಾನು ರುಜು ಮಾಡಿದ್ದು, ನನ್ನ ರುಜುವನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ಚಾಸಾ-1 ಇವರು ಹೇಳಿದ ಪ್ರಕಾರ ನಾನು ನಿಪಿ.2 ದೂರು ಬರೆದಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿವೆ.

ಪಾಟೀಸವಾಲುಃ- ಆರೋಪಿತರಪರ ಶ್ರೀ ಕೆ ಎಂ ಎಸ್ / ಎಲ್ ಯು ವಕೀಲರಿಂದ.

ನಾನು ಬಿ.ಇ. ಪದವಿಧರ. ನಮ್ಮ ಊರಿನಿಂದ 14 ಕಿಮೀ ದೂರದಲ್ಲಿ ಚಾಸಾ-1 ಇವರ ಊರು ಇದೆ. ಚಾಸಾ-1 ಇವರು ನನ್ನ ಸೋದರ ಮಾವ , ಅವರ ತಂದೆ ನನಗೆ ತಾತನಾಗಬೇಕು. ನಿಪಿ.2 ದೂರನ್ನು ದಿ.14-05-2022 ರಂದು ಪೊಲೀಸ್ ಠಾಣೆಯಲ್ಲಿ ಬರೆದಿರುತ್ತೇನೆ. ದೂರು ಬರೆಯುವ ಸಮಯದಲ್ಲಿ ನಾನು , ಚಾಸಾ-1 ಮತ್ತು ಅವರ ತಂದೆ ಹಾಲಪ್ಪ ಇದ್ದರು.

ಆರೋಪಿತರ ತಾಯಿ ಚಾಸಾ-1 ಮತ್ತು ಅವರ ತಂದೆಯ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದು , ಅದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಚಾಸಾ-1

ಇವರು ನನ್ನ ಕಡೆಯಿಂದ ನಿಪಿ.2 ಸುಳ್ಳು ದೂರು ಬರೆಸಿರುತ್ತಾರೆ ಎನ್ನುವುದು ಸರಿಯಲ್ಲ. ಚಾಸಾ–1 ಇವರು ನನಗೆ ಸಂಬಂಧಿಕರಾಗಿರುವುದರಿಂದ ಅವರು ಸುಳ್ಳು ವಿಷಯಗಳನ್ನು ಹೇಳಿದ್ದು, ಆ ವಿಷಯಗಳನ್ನು ನಾನು ಬರೆದಿನಿರುತ್ತೇನೆ ಎನ್ನುವುದು ಸುಳ್ಳು.

ನಿಪಿ.2 ರಲ್ಲಿ ಬರೆದ ವಿಚಾರ ಗೊತ್ತಿಲ್ಲದಿದ್ದರೂ ಸಹ ಚಾಸಾ–1 ನನ್ನ ಸಹೋದರ ಮತ್ತು ಅವರ ತಂದೆ ನನ್ನ ತಾತನಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ– ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/–

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.62/2023

PW- 08

CW- 02

ಪ್ರ.ವ. ಬೋ.ದಿನಾಂಕಃ 05-02-2025

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ನಿಂಗರಾಜ್ ಬಿ ಕೆ |
| ತಂದೆ/ಗಂಡನ ಹೆಸರು | : | ರೇವಣಸಿದ್ದಪ್ಪ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ದ್ಯಾಮವ್ವನಹಳ್ಳಿ, ದಾವಣಗೆರೆ ತಾ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನಿಪಿ.6 ರಿಂದ 12 ಫೋಟೋ ನೋಡುತ್ತಿದ್ದು , ಅವುಗಳಲ್ಲಿ ನನ್ನ ಭಾವಚಿತ್ರ ಇರುತ್ತದೆ. ಸದರಿ ಫೋಟೋದಲ್ಲಿರುವ ಮನೆ ಚಾಸಾ-1 ರವರದ್ದಾಗಿರುತ್ತದೆ.

ದಿ.14-05-2022 ರಂದು ಚಾಸಾ-1 ಇವರ ಮನೆ ಹತ್ತಿರ ಪೊಲೀಸರು ನನ್ನನ್ನು ಮತ್ತು ಚಾಸಾ-3 ಇವರನ್ನು ಮಹಜರ್ ಮಾಡಬೇಕು ಎಂದುಕರೆದಿದ್ದರು. ಸದರಿ ಸ್ಥಳವನ್ನು ಚಾಸಾ-1 ರವರು ಪೊಲೀಸರಿಗೆ ತೋರಿಸಿದರು. ಮನೆ ಸಾಮಾನುಗಳು ಚೆಲ್ಲಾಪಿಲ್ಲಿಯಾಗಿ , ಕದ , ಚಿಲಕ ಮುರಿದತ್ತು , ಸ್ಥಳದಲ್ಲಿ ರಕ್ತವಾಗಿದ್ದನ್ನು ತೋರಿಸಿದರು , ಅದೇ ಊರಿನ ಇಬ್ಬರು ಬಂದು ಗಲಾಟೆ ಮಾಡಿ, ಮಚ್ಚನ್ನು ಬಳಸಿ ಕೊಲೆ ಮಾಡಲು ಪ್ರಯತ್ನಿಸಿದ್ದಾರೆ ಎಂದು ತಿಳಿಸಿದರು. ಅಜ್ಜಪ್ಪ ಮತ್ತು ಅವರ ತಂದೆಯವರಿಗೆ ಕೈ ಹತ್ತಿರ ಏಟು ಬಿದ್ದಿತ್ತು. ಪೊಲೀಸರು ಕದ ಮುರಿದ ಚಿಲಕ , ರಕ್ತವಾಗಿದ್ದ ಮಚ್ಚು , ಒಂದು ರಕ್ತ ಕಲೆ ಇದ್ದ ಅಂಗಿ , ಪಂಜೆ , ಇವುಗಳ ಬಗ್ಗೆ ಪೊಲೀಸರು ನಿಪಿ.3 ಮಹಜರ್ ಮಾಡಿ , ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಮಹಜರ್ ನೋಡುತ್ತಿದ್ದು , ನನ್ನ ರುಜು ನಿಪಿ.3(ಸಿ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ನಕ್ಷೆ ತಯಾರು ಮಾಡಿದ್ದು , ಅದರಲ್ಲಿ

ನನ್ನ ರುಜು ಇದ್ದು , ನಿಪಿ.4(ಸಿ) ಎಂದು ಗುರುತಿಸಲಾಯಿತು.

ಆ ದಿನ ಪೊಲೀಸರು ಅಮಾನತ್ತುಪಡಿಸಿಕೊಂಡ ಮುದ್ದೆಮಾಲುಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ. ಅವು ನ್ಯಾಯಾಲಯದ ಮುಂದೆ ಇದ್ದು , ಮು.ಮಾ.1 ರಿಂದ 4 ಎಂದು ಈಗಾಗಲೇ ಗುರುತಿಸಲಾಗಿದೆ.

<u>ಪಾಟೀಸವಾಲುಃ-</u> ಆರೋಪಿತರಪರ ಶ್ರೀ ಕೆ ಎಂ ಎಸ್ / ಎಲ್ ಯು ವಕೀಲರಿಂದ.

ನಾನು ದ್ಯಾಮವ್ವನಹಳ್ಳಿಯಲ್ಲಿ ವಾಸ ಮಾಡಿಕೊಂಡಿದ್ದೇನೆ. ನಮ್ಮ ಊರಿನಿಂದ ಚಾಸಾ-1 ಇವರ ಗ್ರಾಮ 15 ಕಿಮೀ ದೂರದಲ್ಲಿದೆ. ಚಾಸಾ-1 ಮತ್ತು ಅವರ ತಂದೆ ನನಗೆ ಸಂಬಂಧಿಕರು. ಚಾಸಾ-1 ಇವರಿಗೆ ನನ್ನ ಅಣ್ಣನ ಮಗಳನ್ನು ಮದುವೆ ಮಾಡಿಕೊಟ್ಟಿರುವುದರಿಂದ ಅವರು ನನಗೆ ಸಂಬಂಧಿಕರಾಗಬೇಕು.

ದಿ.14-05-2022 ರಂದು ಪೊಲೀಸರು ಮಧ್ಯಾಹ್ನ 4-00ಕ್ಕೆ ಬರಲು ಹೇಳಿದ್ದರು, ಅವರು ಬರುವ ಪೂರ್ವದಲ್ಲಿ ನಾವು ಸ್ಥಳಕ್ಕೆ ಹೋಗಿದ್ದೇವು. ಪೊಲೀಸರು ನಮಗೆ ಮೊದಲೇ ಬರಬೇಕು ಎಂದು ತಿಳಿಸಿದ್ದರು. ಪೊಲೀಸರು ನನಗೆ ತಿಳಿಸಿದ ಸಮಯ ಮಧ್ಯಾಹ್ನ 12-00 ರಿಂದ 1-00 ಗಂಟೆಯಾಗಿತ್ತು , ಆ ಸಮಯದಲ್ಲಿ ನಾನು ನಮ್ಮ ಊರಿನ ಮನೆಯಲ್ಲಿದ್ದೆ. ಇನ್ಸಪೆಕ್ಟರ್ ಮತ್ತು ಇಬ್ಬರು ಪೊಲೀಸರು ಬಂದಿದ್ದರು. ನನ್ನ ಮತ್ತು ಚಾಸಾ-3 ಇವರನ್ನು ಹೊರತುಪಡಿಸಿ ಇನ್ನು ಸುಮಾರು ಜನ ಸ್ಥಳದಲ್ಲಿದ್ದರು , ಆದರೆ ಅವರು ಸಹಿ ಮಾಡಿದಾದರೋ ಇಲ್ಲವೋ ನಾನು ನೋಡಿಲ್ಲ. ಚಾಸಾ-1 ಇವರು ಹೇಳಿದ್ದರಿಂದ ಗಲಾಟೆಯಾಗಿದ್ದ ವಿಚಾರ, ವಸ್ತುಗಳು ಚೆಲ್ಲಾಪಿಲ್ಲಿಯಾಗಿದ್ದ ಬಗ್ಗೆ ನನಗೆ ಗೊತ್ತಾಗಿರುತ್ತದೆ. ಸಾಕ್ಷಿ ಮುಂದುವರೆದು – ಸ್ಥಳಕ್ಕೆ ಹೋಗಿದ್ದೇವು, ನಾನು ನೋಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಸ್ಥಳಕ್ಕೆ ಹೋದಾಗ ಪೊಲೀಸರು ನಾಲ್ಕೈದು ಫೋಟೋ ತೆಗೆದರು. ಸಹಿ ಮಾಡುವ ಸಮಯದಲ್ಲಿ ಸಂಜೆ 4-50 ಗಂಟೆಯಾಗಿತ್ತು. ಅಡುಗೆ ಮನೆ ಎಂಟು ಒಂಭತ್ತು ಅಡಿ ಅಗಲ ಇರುತ್ತದೆ. ಎತ್ತರ ಸುಮಾರು ಒಂಭತ್ತುವರಿಯಿಂದ ಹತ್ತು ಅಡಿ ಇರುತ್ತದೆ. ಅಡುಗೆ ಮನೆ ಮತ್ತು ಚೆಲ್ಲಾಪಿಲ್ಲಿಯಾಗಿದ್ದ ವಸ್ತುಗಳು ಇದ್ದ ಹಾಲ್ ಅಳತೆ ಮಾಡಿರುತ್ತಾರೆ. ಮನೆಗೆ ಮುಂಭಾಗ ಮತ್ತು ಹಿಂಭಾಗದಲ್ಲಿ ಎರಡು ಬಾಗಿಲುಗಳು ಇವೆ. ಈ ಎರಡು ಬಾಗಿಲು ಹೊರತುಪಡಿಸಿ ಬಾತ್ ರೂಮೀನ ಒಂದು ಬಾಗಿಲು ಇದೆ , ಅದನ್ನು ಹೊರತುಪಡಿಸಿ ಬೇರೆ ಬಾಗಿಲುಗಳು ಇಲ್ಲ.

ಇಬ್ಬರು ವ್ಯಕ್ತಿಗಳು ಮಚ್ಚನ್ನು ತೆಗೆದುಕೊಂಡು ಬಂದು ಚಾಸಾ–1 ಮತ್ತು ಅವರ ತಂದೆಯ ಕೊಲೆ ಮಾಡಲು ಪ್ರಯತ್ನಿಸಿದ್ದರು ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತರು ಚಾಸಾ–1 ಮತ್ತು ಅವರ ತಂದೆ ವಿರುದ್ಧ ದೂರು ಕೊಟ್ಟಿದ್ದು , ಅದರಿಂದ ತಪ್ಪಿಸಿಕೊಳ್ಳುಲು ಚಾಸಾ–1 ಇವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

ನ್ಯಾಯಾಲಯದ ಮುಂದೆ ಇರುವ ಮಚ್ಚು ಚಾಸಾ–1 ಇವರ ಮನೆಯದ್ದಾಗಿದ್ದು , ಅದು ಅವರಿಗೆ ಸಂಬಂಧಪಟ್ಟಿದ್ದಾಗಿರುತ್ತದೆ ಎನ್ನುವುದು ಸುಳ್ಳು. ಮು.ಮಾ.1 ರಿಂದ 4 ಕ್ಕು ಈ ಕೇಸಿಗೂ ಯಾವುದೇ ರೀತಿ ಸಂಬಂಧವಿಲ್ಲದಿದ್ದರೂ ಸಹ ಚಾಸಾ–1 ರವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿತರ ಮೇಲೆ ಹಲ್ಲೆಯಾಗಿದ್ದು , ಅವರು ದೂರು ಕೊಟ್ಟಿದ್ದು, ಅದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪೊಲೀಸರು ನನ್ನನ್ನು ಮಹಜರ್ ಸಾಕ್ಷಿಯಾಗಿ ಬರಲು ಹೇಳಿಲ್ಲ , ನಾನು ಸ್ಥಳಕ್ಕೆ ಹೋಗಿಲ್ಲ , ಸ್ಥಳದಲ್ಲಿ ಪೊಲೀಸರು ನನ್ನ ಸಮಕ್ಷಮ ನಿಪಿ.3 ಮಹಜರ್ ಮಾಡಿಲ್ಲ , ನಿಪಿ.4 ನಕ್ಷೆ ತಯಾರಿಸಿಲ್ಲ , ಫೋಟೋ ತೆಗೆಸಿಲ್ಲ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ– ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/–

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ದಾವಣಗೆರೆ.